International Journal of Applied Research 2019; 5(11): 94-98




**ISSN Print:** 2394-7500
**ISSN Online:** 2394-5869
**Impact Factor:** 5.2
IJAR 2019; 5(11): 94-98
www.allresearchjournal.com
Received: 16-09-2019
Accepted: 18-10-2019

**ನಂದಿನಿ ಕುಲಕರ್ಣಿ**
ಸಂಶೋಧನಾ ವಿದ್ಯಾರ್ಥಿನಿ
ಮೈಸೂರು ವಿಶ್ವವಿದ್ಯಾಲಯ
ಮೈಸೂರು

**Correspondence Author:**
**ನಂದಿನಿ ಕುಲಕರ್ಣಿ**
ಸಂಶೋಧನಾ ವಿದ್ಯಾರ್ಥಿನಿ
ಮೈಸೂರು ವಿಶ್ವವಿದ್ಯಾಲಯ
ಮೈಸೂರು

# ತತ್ವದ ಬೆಳಕಿನಲ್ಲಿ ಸಂಸ್ಕಾರಗಳ ಹುಡುಕಾಟ

**ನಂದಿನಿ ಕುಲಕರ್ಣಿ**

ಲಲಿತ ಕಲೆಗಳು ದೈವಿಕ ಭಾವನೆಗಳನ್ನು ಜಾಗೃತಗೊಳಿಸಲು ಸಹಕಾರಿ ಎಂಬುದನ್ನು ಹಿಂದಿನಿಂದ ಪ್ರತಿಪಾದಿಸುತ್ತ ಬರಲಾಗಿದೆ. ಕಲೆಗಳನ್ನು ಮನಃಪೂರ್ವಕವಾಗಿ ಆಸ್ವಾದಿಸಿದಲ್ಲಿ ನಾವು ಅಂತಹುದೊಂದು ಅನುಭೂತಿ ಪಡೆಯಲು ಸಾಧ್ಯ

ಲಲಿತ ಕಲೆಗಳು ಮಾನವನ ಸಾಂಸ್ಕೃತಿಕ ಬದುಕಿಗೆ ಸಂಬಂಧಿಸಿದ್ದು. ನೃತ್ಯವೂ ಅಷ್ಟೇ. ಇದು ಕೇವಲ ಮನರಂಜನೆಗಾಗಿ ಇರುವುದು ಎಂದರೆ ತಪ್ಪಾದೀತು. ಇದು ಕಲಿಕೆಯೊಂದಿಗೆ ದಾರ್ಶನಿಕರ ದರ್ಶನಗಳನ್ನು ಮುಂದಿನ ಪೀಳಿಗೆಗೆ ಸಾರುತ್ತ, ತತ್ವಗಳನ್ನು ಬಿತ್ತುತ್ತ ಸಾಗುತ್ತದೆ.

ಪ್ರಕೃತಿಯನ್ನು ಪರಿಷ್ಕೃತಗೊಳಿಸುವುದು ಸಂಸ್ಕೃತಿ. ಶ್ರೀ ಸಾಮಾನ್ಯರಲ್ಲಿ ಈ ಚಿಂತನೆ ಬಲು ಸುಲಭವಾಗಿ ಆವಿರ್ಭವಿಸಬೇಕೆಂದರೆ ಅದು ಕೇವಲ ಈ ಕಲೆಗಳು ನೀಡುವ ಪಾಠದಿಂದ. ಪಂಚೇಂದ್ರಿಯ, ಪಂಚ ಮಹಾಭೂತಗಳನ್ನು ಬಳಸಿಕೊಳ್ಳುವ ನೃತ್ಯ ವಿಶಿಷ್ಟ ರೀತಿಯ ಸಂಯೋಜನೆಯಿಂದ ಮನಸ್ಸನ್ನು ಹದವಾಗಿಸುತ್ತದೆ. ಈ ಅನುಭವವನ್ನೇ ಮಿಮಾಂಸಕರು ರಸಾನುಭವ ಎಂದು ಕರೆದರು.

ಅಪೌರುಷೇಯ ಎನಿಸಿದ ವೇದಗಳನ್ನು ಸರಳೀಕರಿಸಿದ ಋಷಿಮುನಿಗಳು ಉಪನಿಷತ್ತುಗಳು, ಪುರಾಣಗಳನ್ನು ಕೊಡುಗೆಯಾಗಿ ನೀಡಿದರು. ವಿಜ್ಞಾನ ಹಾಗೂ ಕಲೆಗಳಿಗೆ ವೇದಗಳೇ ಆಧಾರ. ಅವುಗಳಿಗೆ ತನ್ನದೇ ಆದ ಸಿದ್ಧಾಂತಗಳಿವೆ. ಅವುಗಳ ಆಧಾರದ ಮೇಲೆ ವ್ಯಕ್ತಿ, ಕುಶಲತೆ, ಕಲ್ಪನಾ ಶಕ್ತಿ, ವೈಚಾರಿಕತೆ ಮನೋಧರ್ಮಗಳ ಸಹಾಯದಿಂದ ಪ್ರತಿವಿದ್ಯೆಯಲ್ಲೂ ತನ್ನದೇ ಆದ ಛಾಪು ಮೂಡಿಸುವಲ್ಲಿ ಸಫಲನಾಗುತ್ತಾನೆ.

ಕರ್ಮದಿಂದ ಈಶ್ವರನನ್ನೂ, ಜ್ಞಾನದಿಂದ ಬ್ರಹ್ಮನನ್ನು ಉಪಾಸಿಸಬೇಕು ಎಂದು ಉಪನಿಷತ್‌ಗಳು ಪ್ರತಿಪಾದಿಸುತ್ತವೆ. ನಿಸ್ವಾರ್ಥವಾಗಿ ಕರ್ಮ ಮಾಡಬೇಕು. ಕರ್ಮ ಮಾರ್ಗ ಬಿಟ್ಟು ಕೇವಲ ಜ್ಞಾನ ಮಾರ್ಗ ಆಯ್ದುಕೊಂಡರೆ ಮೋಕ್ಷ ಸಿಗಲಾರದು ಎಂಬುದು ಅವುಗಳ ಸಾರ.

ಪೌರಾಣಿಕ ನೀತಿ ತತ್ವದ ತಳಹದಿ ಧರ್ಮ. ಅಷ್ಟಾದಶ ಪುರಾಣಗಳು ಸಹ ಸತ್ಯ, ಅಹಿಂಸೆ, ಕ್ಷಮೆ, ಇಂದ್ರಿಯ ನಿಗ್ರಹ, ದಯೆ, ದಾನ, ಶೌಚ, ಸತ್ಯ, ತಪಸ್ಸು ಮತ್ತು ಜ್ಞಾನಗಳ ಬಗ್ಗೆ ಹೇಳುತ್ತವೆ. ವಿಶೇಷವೆಂದರೆ ದೈಹಿಕ ಹಿಂಸೆ ಮಾತ್ರವಲ್ಲ, ಚಾಡಿ ಹೇಳುವುದು, ಮತ್ತೊಬ್ಬರಿಗೆ ಕೇಡು ಬಯಸುವುದು ಹಾಗೂ ವಿಶ್ವಾಸಘಾತವನ್ನು ಸಹ ಪುರಾಣಗಳು ಹಿಂಸೆ ಎಂದೇ ಪರಿಗಣಿಸುತ್ತವೆ.

## ತತ್ತ್ವ ಎಂದರೇನು?

ತತ್ತ್ವ ಶಾಸ್ತ್ರ ಎನ್ನುವುದು ಒಂದು ಜ್ಞಾನದ ಶಾಖೆ. ಅಂದರೆ ಜಗತ್ತಿನ ರಚನೆ, ಹುಟ್ಟು, ಜೀವದ ಬದುಕಿನ ಗುರಿ, ಮೊದಲಾದವುಗಳ ಅರಿಕೆಯೇ ತತ್ತ್ವ ಶಾಸ್ತ್ರ.

ತತ್+ತ್ವ=ಇರುವಿಕೆ ಅಥವಾ ಮೂಲ ಸತ್ಯ. ಪಾಶ್ಚಾತ್ಯರ ಫಿಲಾಸಫಿ, ಫಿಲಾಸ್+ ಸೋಫಿ ಎಂಬೆರಡು ಪದದಿಂದ ಹುಟ್ಟಿರುವುದು. ಫಿಲಾಸ್ ಎಂದರೆ ಪ್ರೀತಿ. ಸೋಫಿ ಎಂದರೆ ವಿದ್ಯೆ, ಜ್ಞಾನ. ಜ್ಞಾನದ ಪ್ರೀತಿಯೇ ಫಿಲಾಸಫಿ.

ತತ್ತ್ವ ಶಾಸ್ತ್ರ ಎಂದರೇನು ಎಂಬುದನ್ನು ಆಲೋಚಿಸಿದರೆ, ಜಗತ್ತು ಎಂದರೇನು? ಅದರ ರಚನೆ ಹೇಗಾಯಿತು? ಇದಕ್ಕೆ ನಿಯಮಗಳೇನು ಮತ್ತು ನಿಯಂತ್ರಣ ಇದೆಯಾ? ಇದ್ದರೆ ಅದು ಹೇಗೆ ಕೆಲಸ ಮಾಡುತ್ತದೆ? ನಾನು ಎಂದರೇನು? ಜಗತ್ತಿಗೂ ನನಗೂ ಸಂಬಂಧ ಇದೆಯೇ? ನಾನು ಹೇಗೆ ಬದುಕಬೇಕು? ದೇವರಿದ್ದಾನೆಯೇ? ಹೇಗಿದ್ದಾನೆ? ಅವನಿಗಿರುವ ಆಕಾರ ಏನು? ದೇವರು ಹೇಗೆ ತನ್ನ ಜಗತ್ತನ್ನು ಪರಿಪಾಲಿಸುತ್ತಾನೆ? ದೇವರು ಒಬ್ಬನೋ ಅಥವಾ ಹಲವಾರು ಸಂಖ್ಯೆಯಲ್ಲಿ ಇದೆಯೋ? ತ್ರಿಲೋಕಗಳು ಉಂಟೇ? ಸಾವು ಖಚಿತವೇ? ಹುಟ್ಟಿನ ನಂತರ ಸಾವು ಇದೆ ಎನ್ನುವುದಾದರೆ ಸಾವಿನ

ನಂತರ ಮತ್ತೆ ಹುಟ್ಟು ಇದೆಯಾ? ನಾವು ನಂಬುವ ಸುಖ ದುಃಖ, ಶುಭ ಅಶುಭಗಳು ಇವೆಯೇ? ದುಃಖದ ಬದಲಿಗೆ ಸುಖ, ಅಶುಭದ ಬದಲು ಶುಭವನ್ನಷ್ಟೇ ಪಡೆಯಲು ವ್ಯವಸ್ಥೆ ಇದೆಯೇ? ಶಾಶ್ವತ ಸುಖ ಇದೆಯೇ? ಶಾಶ್ವತ ಸುಖ ಯಾವುದು? ಅದನ್ನು ಪಡೆಯುವುದು ಹೇಗೆ? ಹೀಗೆ ಹಲವಾರು ಪ್ರಶ್ನೆಗಳು ಬಹಳ ಹಿಂದಿನಿಂದಲೂ ಮನುಷ್ಯನನ್ನು ಕಾಡುತ್ತಿವೆ.

ಇಂತಹ ಪ್ರಶ್ನೆಗಳಿಗೆ ದಾರ್ಶನಿಕರು ಕಂಡು ಹಿಡಿದ ಉತ್ತರಗಳೇ ತತ್ತ್ವಜ್ಞಾನ. ದಾರ್ಶನಿಕರು ಈ ನಿಟ್ಟಿನಲ್ಲಿ ಮಾಡಿದ ಚಿಂತನವೇ ಹಿಂದೂ ದರ್ಶನ ಅಥವಾ ಭಾರತೀಯ ತತ್ತ್ವಶಾಸ್ತ್ರ. ಬಹುಶಃ ಚಿಂತಕರು ಜೀವನದುದ್ದಕ್ಕೂ ಅಧ್ಯಯನ ಮಾಡಿದರೂ ಮುಗಿಯದಷ್ಟು ಚಿಂತನೆಗಳು ಇಲ್ಲಿ ತೆರೆದುಕೊಳ್ಳುತ್ತವೆ. ಇದನ್ನು ಮೋಕ್ಷ ಶಾಸ್ತ್ರ ಎಂದೂ ಕರೆದಿದ್ದಾರೆ. ವೇದಾಂತವಂತಲೂ ಕೆಲವು ಸಲ ಹೇಳುವ ರೂಢಿ ಇದೆ. ಉದಾಹರಣೆಗೆ ಅವನು ವೇದಾಂತಿ, ಯಾವಾಗಲೂ ವೇದಾಂತವನ್ನು ಹೇಳುತ್ತಾನೆ ಎಂದರೆ ತತ್ತ್ವದ ವಿಚಾರಗಳನ್ನು ಹೇಳುವವ ಎಂದರೆ ತತ್ತ್ವಜ್ಞಾನಿ ಎಂದೂ ಅರ್ಥೈಸಬಹುದು.

ಭಾರತೀಯ ತತ್ತ್ವಶಾಸ್ತ್ರವು ದುಃಖ ನಿವಾರಣೆಗಾಗಿ ತೆರೆದಿದೆ. ಇಲ್ಲಿ ಬದುಕಿನ ಸಮಸ್ಯೆ, ಅವುಗಳ ಕಾರಣ ಹಾಗೂ ಪರಿಹಾರದ ಚಿಂತನೆ ಇದೆ. ಪಾಶ್ಚಾತ್ಯರ ಫಿಲಾಸಫಿಯಲ್ಲಿ ಕೇವಲ ಕುತೂಹಲಕ್ಕಾಗಿ ಕೆದಕುವ ಮನೋಭಾವ ಕಂಡು ಬರುತ್ತದೆ.

ಇದು ಒಂದು ಶ್ರೇಷ್ಠವಾದ ರಾಜವಿದ್ಯೆ. ನಿಜವಾದ ಜ್ಞಾನ, ಗಹನವಾದ ರಹಸ್ಯ, ಜೀವನವನ್ನು ಪ್ರೀತಿಸುವವರೆಲ್ಲ ಓದಿ ಅರ್ಥೈಸಿಕೊಳ್ಳಬೇಕಾದ ವಿಷಯ ಸಂಗ್ರಹ.

ತತ್ತ್ವ ಅಥವಾ ದರ್ಶನಶಾಸ್ತ್ರದಲ್ಲಿ ಆಸ್ತಿಕ ಹಾಗೂ ನಾಸ್ತಿಕ ಎಂಬ ಎರಡು ವಿಭಾಗಗಳಾಗಿ ವಿಭಾಗಿಸಿದ್ದಾರೆ. ಎಲ್ಲರಿಗೂ ತಿಳಿದ ಹಾಗೆ ದೇವರು, ಧರ್ಮ, ಪುರಾಣಗಳನ್ನು ನಂಬುವವರನ್ನು ಆಸ್ತಿಕರು, ಒಪ್ಪದಿರುವವರನ್ನು ನಾಸ್ತಿಕರು ಎಂದು ಕರೆಯುವರು. "ನಾಸ್ತಿಕೋ ವೇದ ನಿಂದಕ" ಎಂದು ಮನು ಸ್ಮೃತಿಯಲ್ಲಿ ಉಲ್ಲೇಖಿಸಿದ್ದಾರೆ. ವೇದಗಳನ್ನು ಒಪ್ಪದವರನ್ನು ನಾಸ್ತಿಕರೆಂದು ಹೇಳುವರು. ವೇದದಲ್ಲಿನ ತತ್ತ್ವದ ದೃಷ್ಟಿಯಲ್ಲಿ ಈಶ್ವರ, ನಿರೀಶ್ವರರೆಂದು ಆಸ್ತಿಕ ನಾಸ್ತಿಕರನ್ನು ಕ್ರಮವಾಗಿ ಹೇಳಬಹುದು.

ಪುರುಷಾರ್ಥ ಸಾಧನೆ ಆಸ್ತಿಕನ ಜೀವಿತದ ಪರಮ ಧ್ಯೇಯ. ಧ್ಯೇಯ ಸಾಧನೆಗೆ ಶುದ್ಧ ಮನಸ್ಸು, ಸ್ವಸ್ಥ ಶರೀರದ ಅಗತ್ಯವಿದೆ. ಇದು ಕೇವಲ ಧರ್ಮದ ಆಚರಣೆಯಿಂದ ಸಾಧ್ಯ. ಹಾಗಿದ್ದಲ್ಲಿ ಹಲವು ವೇದ ವೇದಾಂತ ಕೋವಿದರು, ಸ್ಮೃತಿಕಾರರು, ಮಾನವನ ಶ್ರೇಯೋಭಿವೃದ್ಧಿಗೆ ಹಾಗೂ ಸರ್ವತೋಮುಖ ಬೆಳವಣಿಗೆಗೆ, ವ್ಯಕ್ತಿತ್ವ ವಿಕಾಸಕ್ಕೆ ಸಂಸ್ಕಾರಗಳನ್ನು ನಿರೂಪಿಸಿದ್ದಾರೆ.

ಶರೀರ ಸಂಬಂಧಿಯಾದ ಷೋಡಷ ಸಂಸ್ಕಾರಗಳನ್ನು ವಿಷದೀಕರಿಸಿದ್ದಾರೆ. ಶ್ರದ್ಧೆಯಿಂದ ಇವುಗಳನ್ನು ಆಚರಿಸಿದರೆ ಅತ್ಯುತ್ತಮ ಜೀವನವನ್ನು ಸಾಗಿಸಬಹುದು. ಆದರೆ ಈಗಿನ ಕಾಲಮಾನದಲ್ಲಿ ಜನರಲ್ಲಿ ಶ್ರದ್ಧೆ ಕಡಿಮೆಯಾಗಿದೆ. ಇದಕ್ಕೆ ಅವರ ಅಜ್ಞಾನವೇ ಕಾರಣ. ಸಂಸ್ಕಾರಗಳನ್ನು ಕುರಿತು ಸರಿಯಾದ ತಿಳುವಳಿಕೆ ಇಲ್ಲದೇ ಅವುಗಳ ವೈಜ್ಞಾನಿಕ ಹಿನ್ನೆಲೆ ಅರಿಯದೇ ಇರುವದು ಮಾನವನ ಅವನತಿಗೆ ಕಾರಣವಾಗಿದೆ.

ಸುಸಂಸ್ಕೃತ ಹಾಗೂ ಸುಭಿಕ್ಷ ರಾಷ್ಟ್ರ ನಿರ್ಮಾಣ ಭಾರತೀಯ ಋಷಿ ಮುನಿಗಳ ಉದಾತ್ತವಾದ ಧ್ಯೇಯ. ಸುಭದ್ರ ರಾಷ್ಟ್ರ ನಿರ್ಮಾಣಕ್ಕೆ ಅವರು ತಿಳಿಸುವ ಮಾರ್ಗ ವ್ಯಷ್ಟಿಯಿಂದ ಸಮಷ್ಟಿ. ಇಲ್ಲಿ ವ್ಯಷ್ಟಿ ಮಾನವನಾದರೆ, ಸಮಷ್ಟಿ ರಾಷ್ಟ್ರವೆಂದು ತಿಳಿಯಬಹುದು. ಅಂದರೆ ಬೇರಿಗೆ ನೀರೆರೆದರೆ ವೃಕ್ಷದಲ್ಲಿ ಹೇಗೆ ವಿಪುಲವಾಗಿ ಫಲಪುಷ್ಪಗಳು ಕಂಗೊಳಿಸುವವೋ ಹಾಗೇ ಮೊದಲು ವ್ಯಕ್ತಿಯ ವ್ಯಕ್ತಿತ್ವ ಸಂಸ್ಕರಿಸಿದರೆ ಪರಿಪೂರ್ಣ ವ್ಯಕ್ತಿತ್ವ ಹೊರ ಹೊಮ್ಮಿ ಉತ್ತಮ ಕುಟುಂಬ, ಹಾಗೆಯೇ ಉತ್ತಮ ಸಮಾಜ ನಿರ್ಮಾಣವಾಗುತ್ತದೆ. ಇದು ಉತ್ತಮ ರಾಷ್ಟ್ರ ನಿರ್ಮಾಣಕ್ಕೆ ಕಾರಣವಾಗುತ್ತದೆ. ಹೀಗಾಗಿಯೇ ಬಹು ಹಿಂದಿನಿಂದಲೂ ಋಷಿ ಮುನಿಗಳು ತಪಸ್ಸು, ಅನುಭವ, ದಿವ್ಯವಾದ ಜ್ಞಾನಗಳಿಂದ ಉಪಾಯಕಾರಿ ಮಾರ್ಗವನ್ನು ಬೋಧಿಸಿದ್ದಾರೆ.

ಸನಾತನ ಸಂಸ್ಕಾರಗಳನ್ನು ವೈದಿಕ ಪ್ರಯೋಗಗಳಲ್ಲಿ ನಾವು ಕಾಣಬಹುದು. ಬೇರೆ ಬೇರೆ ಸ್ಮೃತಿಕಾರರು, ಮಹಾ ಮೇಧಾವಿಗಳು ಹಾಗೂ ಋಷಿ ಮುನಿಗಳು ಅವರವರದೇ ಆದ ರೀತಿಯಲ್ಲಿ ವೇದಗಳ ಬೀಜ ರೂಪದ ಸಂಸ್ಕಾರಗಳ ಆಚರಣೆಗಳನ್ನು ವಿಸ್ತರಿಸಿ ವಿವರಿಸಿದ್ದಾರೆ. ಇವುಗಳ ಸಂಖ್ಯೆ, ಆಚರಣೆಗಳ ವಿವರಣೆಗಳಲ್ಲಿ ವೈವಿಧ್ಯ ಇದ್ದರೂ ಎಲ್ಲರ ಧ್ಯೇಯ ಒಂದೇ ಆಗಿತ್ತು, ಅದು ಮಾನವನನ್ನು ಸಂಸ್ಕರಿಸುವುದು. "ಏಕಂ ಸತ್ ವಿಪ್ರಾಃ ಬಹುದಾಃ ವದಂತಿ" ಎಂಬ ಉಕ್ತಿಯಲ್ಲಿ ಅರ್ಥ ಸತ್ಯ ಒಂದೇ ಆಗಿದ್ದು, ಅದನ್ನು ಜ್ಞಾನಿಗಳು ಹಲವಾರು ರೀತಿಯಲ್ಲಿ ಅರ್ಥೈಸುತ್ತಾರೆ. ಅಂದರೆ ಸಂಸ್ಕಾರವಂತ ಮಾನವನ ಇಹ ಪರಗಳ ಒಳಿತಿಗಾಗಿ ಸಂಸ್ಕಾರಗಳು ಬೇಕು. ಈ ಜನ್ಮದ ಸಂಸ್ಕಾರಗಳು ಮುಂದಿನ ಜನ್ಮಕ್ಕೂ ಕಾರಣವಾಗುತ್ತವೆ. ನಾವು ನಿತ್ಯವೂ ಕಾಣಸಿಗುವ ಚಿತ್ರ ವಿಚಿತ್ರವಾದ ಮನುಷ್ಯಭೇದ, ನಡೆ ನುಡಿ ಕಂಡಾಗ ಸಹಜವಾಗಿ ಹಿಂದಿನ ಜನ್ಮದ ಸುಕೃತಫಲವೆಂದೋ ಅಥವಾ ಹಿಂದಿನ ಜನ್ಮದ ಸಂಸ್ಕಾರಗಳಿಂದ ಈ ಜನ್ಮದ ಒಳ್ಳೆಯ ನಡತೆ ಎಂದು ಹೇಳುವುದನ್ನು ಕೇಳುತ್ತೇವೆ.

ಲಲಿತ ಕಲೆ ಒಲಿಯುವ ವಿದ್ಯಾರ್ಥಿಗಳಿಗೆ ಅತ್ಯುತ್ತಮವಾದ ಗುರುವಿನ ಮಾರ್ಗದರ್ಶನದ ಜೊತೆ ಹಿಂದಿನ ಜನ್ಮದ ಸಂಸ್ಕಾರವೂ ಕಾರಣವೆಂದು ಹೇಳುವುದು ಸಹಜವಲ್ಲವೇ? ಆದ್ದರಿಂದಲೇ ಮಾನವ ಸಂಸ್ಕಾರದಿಂದ ಪಾವನನಾಗುತ್ತಾನೆ. ಉದ್ಧಾರ ಹೊಂದುತ್ತಾನೆ ಎಂದರೆ ತಪ್ಪಾಗಲಾರದು.

ಇತ್ತೀಚಿನ ದಿನಗಳಲ್ಲಿ ದೇಶ ಕಾಲ ಪರಿಸ್ಥಿತಿಗಳಿಗೆ ಅನುಗುಣವಾಗಿ ಸಂಸ್ಕಾರಗಳ ಆಚರಣೆಯಲ್ಲಿ ವ್ಯತ್ಯಾಸ ಅಥವಾ ಕೊರತೆ ಇರಬಹುದೇ ವಿನಃ ಇಲ್ಲವೇ ಇಲ್ಲ ಎನ್ನುವಂತಿಲ್ಲ. ಹೀಗಿದ್ದಾಗ ಯುವ ಪೀಳಿಗೆಗೆ ಇದರ ಅರಿವು ಅವುಗಳ ಅವಶ್ಯಕತೆಗಳ ಕುರಿತಾದ ಸರಿಯಾದ ರೀತಿಯಲ್ಲಿ ತಿಳುವಳಿಕೆಯನ್ನು ನೀಡಿದರೆ ಪ್ರಜ್ಞಾವಂತ ಪ್ರಜೆಯಾಗಿ ಸಂಸ್ಕಾರಗಳ ಅನುಷ್ಠಾನದ ಸ್ವರ್ಣಯುಗ ಬಾರದೇ ಇರಲಾರದೆಂಬುದು ವಿದ್ವಾಂಸರ ಅಭಿಪ್ರಾಯ.

ಹಾಗಾದರೆ ಸಂಸ್ಕಾರಗಳು ಎಂದರೇನು ಎಂಬ ಪ್ರಶ್ನೆ ಇಲ್ಲಿ ಕಾಡುತ್ತದೆ. ಪುರುಷಾರ್ಥ ಸಾಧನೆಗಾಗಿ ಶುದ್ಧ ಮನಸ್ಸು ಮತ್ತು ದೇಹಕ್ಕೆ ವಿಹಿತ ಕರ್ಮಗಳ ಅವಶ್ಯಕತೆ ಇದೆ. ಸಮ್ ಉಪಸರ್ಗದಿಂದ ಕೂಡಿದ ಕೃ ಧಾತುವಿಗೆ ಘಞ ಪ್ರತ್ಯ ಸೇರಿದಾಗ ಹುಟ್ಟುವ ಪದ ಸಂಸ್ಕಾರ. ಕರ್ಮ ಜನ್ಯ ಗುಣಧರ್ಮವೇ ಸಂಸ್ಕಾರ. ಆತ್ಮನ ಕೃತಕ ಗುಣವೆಂದೂ ಅದ್ವೈತಿಗಳು, ಪುನರುತ್ಪತ್ತಿ ಶಕ್ತಿ ಎಂದು ನೈಯ್ಯಾಯಿಕರು ಅರ್ಥೈಸುತ್ತಾರೆ.

ಸಂಸ್ಕೃತ ಸಾಹಿತ್ಯದಲ್ಲಿ ಸಂಸ್ಕಾರವೆಂದರೆ ಶಿಕ್ಷಣ, ತರಬೇತಿ, ಶಿಷ್ಟಾಚಾರ, ಗುಣೋತ್ಕರ್ಷ, ಪ್ರಾಯಶ್ಚಿತ್ತ ಶುದ್ಧಿ, ಪವಿತ್ರಗೊಳಿಸುವಿಕೆ ಎಂಬ ವಿವಿಧ ಅರ್ಥಗಳು ಇವೆ. ಗೃಹ್ಯಸೂತ್ರ ಹಾಗೂ ಸ್ಮೃತಿಗಳಲ್ಲಿ ಉಕ್ತವಾದ ಈ ಪದ ಮನುಷ್ಯನ ಶರೀರವನ್ನು ಶುದ್ಧಗೊಳಿಸಿ ಆತ್ಮೋನ್ನತಿಯ ಮೂಲಕ ಸರ್ವತೋಮುಖವಾಗಿ ಪರಿಪೂರ್ಣವಾಗಿಸುವ ಉಪಯುಕ್ತವಾದ ಧಾರ್ಮಿಕ ಪ್ರಕ್ರಿಯೆ ಎಂಬ ಅರ್ಥವನ್ನು ಕೊಡುತ್ತದೆ.

ಯೋಗಿಗಳ ದೃಷ್ಟಿಯಲ್ಲಿ ಸಂಸ್ಕಾರಗಳು ಮೂರು ತರಹದ್ದು. ಅವು ಭೌತಿಕ ಸಂಸ್ಕಾರ, ಮಾನಸಿಕ ಸಂಸ್ಕಾರ, ಆತ್ಮಿಕ ಸಂಸ್ಕಾರ. ಸಂಸ್ಕಾರವೆಂದರೆ ಸಂಸ್ಕರಿಸುವುದು, ಪರಿಶುದ್ಧಗೊಳಿಸುವುದು. ಕರ್ಮ ವಾಸನೆಗಳಿಂದ ಮನಸ್ಸಿನ ಮೇಲೆ ಆಗತಕ್ಕ ಪರಿಣಾಮಗಳಿಗೂ ಸಂಸ್ಕಾರ ಎನ್ನುವರು. ಶುದ್ಧೀಕರಣ ಕ್ರಿಯೆ ಹಾಗೂ ವಾಸನಾ ನಿಮಿತ್ತವಾದ ಚಿತ್ತ ಪರಿಣಾಮಗಳ ನಾವು ಕಾಣಬಹುದು. ನೈಯ್ಯಾಯಿಕರ ಪ್ರಕಾರ ವೇಗ, ಭಾವನಾ ಹಾಗೂ ಸ್ಥಿತಿ ಸ್ಥಾಪಕತ್ವಗಳೇ ತ್ರಿವಿಧ ಸಂಸ್ಕಾರಗಳು.

ಸಂಸ್ಕಾರಗಳು ಮಲಾಪನಯನ ಮಾಡುತ್ತವೆ. ಅಂದರೆ ಮಾಲಿನ್ಯವನ್ನು ಹೊರಹಾಕುತ್ತವೆ. ಉದಾಹರಣೆಗೆ ಲೋಹದ ದೇವತಾ ವಿಗ್ರಹವನ್ನು ತೊಳೆದು ಅದು ಹೊಳೆಯುವಂತೆ ಮಾಡುವುದು ಮಲಾಪನಯ ಸಂಸ್ಕಾರ. ಸುಗಂಧ ದ್ರವ್ಯಗಳಿಂದ ಅರ್ಚಿಸಿ ಆ ಪ್ರತಿಮೆಯಲ್ಲಿ ದೇವತಾ ಭಾವವನ್ನು ಆಹ್ವಾನಿಸುವುದು ಅತಿಶಯಾಧಾನ ಅಥವಾ ಗುಣಾಧಾನ ಸಂಸ್ಕಾರ. ಇಲ್ಲಿ ಒಂದು ಸಂಸ್ಕಾರ ಮಾಲಿನ್ಯ ದೂರವಾಗಿಸಿದರೆ, ಇನ್ನೊಂದು ಅಲ್ಲಿನ ಗುಣವನ್ನು, ವರ್ಚಸ್ಸನ್ನು ಹೆಚ್ಚಿಸುತ್ತದೆ ಅಥವಾ ಶ್ರೀಮಂತಗೊಳಿಸುತ್ತದೆ. ಆದ್ದರಿಂದ ಧಾರ್ಮಿಕ ಸಂಸ್ಕೃತಿಯಲ್ಲಿ ಈ ಸಂಸ್ಕಾರಗಳಿಗೆ ಅತಿ ಹೆಚ್ಚು ಪ್ರಾಮುಖ್ಯತೆ ಇದೆ.

> "ಸಂಸ್ಕಾರೋ ಹೀ ನಾಮ ಸಂಸ್ಕಾರಸ್ಯ ಗುಣಾಧಾನೇನ ವಾ ಸ್ಯಾಧ್ದೋಷಾಪ ನಯನೇನ ವಾ' ಎಂದು ಹೇಳುತ್ತಾರೆ.

ನಿತ್ಯ ಶುಭ ಆಚರಣ ಹಾಗೂ ಮನಸ್ಸಿನ ನಿಯಂತ್ರಣ ರೂಪವಾದ ಮಂಗಳ ಸಂಸ್ಕಾರಗಳ ಸಮುದಾಯವನ್ನೇ ಧರ್ಮವೆಂದು ಚತುರ್ವೇದ ಸಂಹಿತೆಯಲ್ಲಿ ಹೇಳುತ್ತಾರೆ. ವೇದಗಳ ಪ್ರಕಾರ ವೈದಿಕರಿಗೆ ಭಗವತ್ ಉಪಾಸನೆಯೇ ಸಂಸ್ಕಾರಗಳ ಸಾಮ್ರಾಟ ಎಂದು ಹೇಳುತ್ತಾರೆ. ಸದ್ಗುಣಗಳ ಅನುಷ್ಠಾನ, ಚಿತ್ತದ ಏಕಾಗ್ರತೆ, ವ್ಯಕ್ತಿತ್ವದ ವಿಕಾಸ, ಸಮರ್ಪಣಾ ಮನೋಭಾವ, ಏಕಾಂತ ಪ್ರಾರ್ಥನೆ ಇವು ಆಧ್ಯಾತ್ಮಿಕ ಸಂಸ್ಕಾರಗಳು.

ಸಾಮಾನ್ಯವಾಗಿ ಮಾನವನ ಮನಸ್ಸು ಭೋಗೋನ್ಮುಖವಾಗಿರುತ್ತದೆ. ಮತ್ತು ಸ್ವಾರ್ಥ ಮನೋಭಾವ ಹೊಂದಿರುತ್ತದೆ. ತನ್ನ ದೈಹಿಕ, ಮಾನಸಿಕ, ಭೋಗದ ಆಸೆಯಿಂದ ಮಾನವ ಹೆಚ್ಚು ಸ್ವಾರ್ಥಿಯಾಗುತ್ತಾನೆ. ಸ್ವಾರ್ಥ ಭಾವ ಅವನನ್ನು ದುಷ್ಕೃತ್ಯಗಳತ್ತ ಕೊಂಡೊಯ್ಯುತ್ತದೆ. ಇದರಿಂದ ಅವನಲ್ಲಿ ಹಿಂಸಾ ಮನೋಭಾವ ಜಾಗೃತವಾಗಿ ಪಶುವಿಗಿಂತಲೂ ವ್ಯತಿರಿಕ್ತ ರೀತಿಯಲ್ಲಿ ಬಾಳುವಂತಾಗುತ್ತದೆ. ಇದರಿಂದ ಸ್ವಸ್ಥ ಸಮಾಜದ ಮಾರಣಹೋಮವಾಗುತ್ತದೆ. ಹೀಗಾಗದಿರಲೆಂದು ವೈದಿಕ ಧರ್ಮವು ಮನಸ್ಸನ್ನು ಸದ್ಭಾವನೆಗಳತ್ತ ಉಪಕ್ರಮಿಸುವಂತೆ, ಉತ್ತಮ ಸಂಸ್ಕಾರಗಳನ್ನು ಹೊಂದುವಂತೆ ಹೇಳುತ್ತದೆ. ಇವು ಮಾನಸಿಕ ಸಂಸ್ಕಾರಗಳು.

ಭೋಗಾಭಿಲಾಷೆಯ ಸ್ವಾರ್ಥ ಬದುಕಿನ ಅನಾರೋಗ್ಯವನ್ನು ಸರಿಪಡಿಸಲು ಮನಸ್ಸು ಹಾಗೂ ಬುದ್ಧಿಗಳನ್ನು ಬ್ರಹ್ಮ ಪ್ರಾಪ್ತಿಯ ಪವಿತ್ರ ದಾರಿಯಲ್ಲಿ ಕೊಂಡೊಯ್ಯುವ ಕಾರ್ಯ ಆಗಬೇಕು. ಇದಕ್ಕಾಗಿ ಸತ್ಯ, ಶಾಂತಿ, ಕರುಣೆ ಇತ್ಯಾದಿ ಸದ್ಗುಣಗಳು ಅಧ್ಯಯನ ಹಾಗೂ ಚಿಂತನೆಗಳಿಂದ ಒಳ್ಳೆಯ ವಿಚಾರಗಳನ್ನು ಅನುಸರಿಸುವುದು ಸಾಧಕನಿಗೆ ಅನಿವಾರ್ಯ. ವೇದೋಪನಿಷತ್ತು, ಸತ್ಪುರುಷರ ವಾಕ್ಯಗಳು ಸಾಧಕನ ಮನಸ್ಸನ್ನು ಸಂಸ್ಕರಿಸುವ ಉದ್ದೇಶವನ್ನೇ ಹೊಂದಿವೆ. ಮನಸ್ಸು, ಬುದ್ಧಿ ಉತ್ಸಾಹಪೂರ್ಣವಾಗಿರಬೇಕು. ಆಲಸ್ಯ ಸ್ವಾರ್ಥಗಳಿಂದ ದೂರವಿರಬೇಕೆಂದು ಹೇಳುವ ಇವು ಭೌತಿಕ ಸಂಸ್ಕಾರಗಳು.

ಜೀವನದ ತ್ಯಾಗ ಹಾಗೂ ಭೋಗದ ಸುಂದರ ಸಮನ್ವಯದಲ್ಲಿಯೇ ತನ್ನ ಸಿದ್ಧಿಯನ್ನು ಕಂಡುಕೊಂಡಿದ್ದರಿಂದ ದೈಹಿಕ ಜಗತ್ತಿನ ಸಮಸ್ತವನ್ನೂ ದೈವಿಕವನ್ನಾಗಿ ಪ್ರಯತ್ನಿಸುವ ದೃಷ್ಟಿಯಲ್ಲಿ ದೇಹದ ದೈವೀಕರಣ, ಭೋಗದ ಆಧ್ಯಾತ್ಮೀಕರಣ ಹಾಗೂ ಇಂದ್ರಿಯಗಳ ಪವಿತ್ರೀಕರಣವನ್ನು ಮನಗಂಡು ಋಷಿಮುನಿಗಳು ಐಹಿಕ ಮತ್ತು ದೈಹಿಕ ವ್ಯಾಪಾರವನ್ನು ಪಾವನಗೊಳಿಸಲು ಧಾರ್ಮಿಕ ಸಂಸ್ಕಾರಗಳನ್ನು ಜೀವನದ ಜೊತೆಗೆ ಹೆಣೆದಿದ್ದಾರೆ. ದೇಹವನ್ನು ಪವಿತ್ರವಾದ ದೇಗುಲಕ್ಕೆ ಹೋಲಿಸಿ ಅಲ್ಲಿ ನೆಲೆಸಿರುವ ಪರಮಾತ್ಮನಿಗೆ ಯಾವುದೇ ರೀತಿಯಲ್ಲೂ ಅಪಚಾರ ಎಸಗದೇ ನಿರ್ಮಲವಾದ ಭಕ್ತಿಯಿಂದ ಅವನನ್ನು ಪೂಜಿಸಲು ದೇಹ ಪಾಪ ಕರ್ಮದಿಂದ ದೂರವಿಡಲು ಷೋಡಷ ಸಂಸ್ಕಾರಗಳನ್ನು ತೋರಿಸಿಕೊಟ್ಟಿದ್ದಾರೆ. ಬ್ರಹ್ಮಚರ್ಯ, ಗೃಹಸ್ಥ, ವಾನಪ್ರಸ್ಥ ಹಾಗೂ ಸನ್ಯಾಸ ಎಂಬ ನಾಲ್ಕು ಆಶ್ರಮಗಳನ್ನು ಹೇಳುತ್ತಾರೆ. ವೃತ್ತಿ ಪ್ರಧಾನವಾದ ನಾಲ್ಕುಜಾತಿಗಳನ್ನು ಹೇಳುತ್ತಾರೆ. ಪ್ರಾಚೀನ ಕಾಲದಲ್ಲಿ ಭಾರತೀಯರು ಸಾಮಾಜಿಕ ಸ್ವಾಸ್ಥ್ಯಕ್ಕೆ ವೈಯಕ್ತಿಕ ಸಂಸ್ಕೃತಿಯೇ ಮುಖ್ಯ ಸಾಧನ ಎಂಬುದನ್ನು ಚನ್ನಾಗಿ ತಿಳಿದಿದ್ದರು. ಆಗ ಸಂಸ್ಕೃತಿ ಕಲೆ ಎಂಬ ಶಬ್ದಗಳನ್ನು ಧಾರಾಳವಾಗಿ ಬಳಸದಿದ್ದರೂ ಅವುಗಳನ್ನು ತಮ್ಮ ದಿನನಿತ್ಯದ ಜೀವನದಲ್ಲಿ ಅಳವಡಿಸಿಕೊಳ್ಳುವ ಪ್ರಯತ್ನ ಮಾಡುತ್ತಿದ್ದರು. ಸುಸಂಸ್ಕೃತವೂ ಕಲಾತಂಕವೂ ಆದ ಅವರ ಜೀವನ ಕೇವಲ ಸಮಾಜಮುಖಿಯಾಗಿರದೇ ಆಧ್ಯಾತ್ಮಿಕ ಸಾಧನೆಯ ಮಾರ್ಗವು ಆಗಿರುತ್ತಿತ್ತು. ಹೀಗಿರುವಾಗ ಪ್ರತಿಯೊಬ್ಬ ವ್ಯಕ್ತಿ ಸಂಸ್ಕೃತಿ, ಸಂಸ್ಕಾರಗಳನ್ನು ಮೈಗೂಡಿಸಿಕೊಂಡು ಜೀವನ ಸಾಗಿಸುವುದು ಸರ್ವೇ ಸಾಮಾನ್ಯವಾಗಿತ್ತು. ಅದಕ್ಕೇ ಕೆಲವು ದೇವತಾ ಪುರುಷರನ್ನು ಅವರ ಜೀವನ ಶೈಲಿಯನ್ನು ನಮ್ಮ ಹಾಗೆ ನಮ್ಮ ಮುಂದಿನ ಪೀಳಿಗೆ ಆದರ್ಶಗಳನ್ನು ಬಳಸಿಕೊಂಡು ಬದುಕುತ್ತಿದೆ. ಪುರಾಣ ಪುರುಷ ಶ್ರೀ ರಾಮಚಂದ್ರ ನಮ್ಮ ಮೊಟ್ಟ ಮೊದಲ ಆದರ್ಶ ಪುರುಷ. ಮಗುವಿನಿಂದ ಹಿಡಿದು ಎಲ್ಲ ವಯೋಮಾನದ ವ್ಯಕ್ತಿಯ ಜೀವನದ ಮೈಲಿಗಲ್ಲು ಶ್ರೀರಾಮ. ಗರ್ಭಿಣಿ ತನ್ನ ಮಗುವನ್ನು ರಾವಣನಂತೆಯೋ, ಕಂಸ, ದುರ್ಯೋಧನರಂತೆ ಇರಲಿ ಎಂದು ಬಯಸದೇ ಸಕಲ ಸದ್ಗುಣ ಸಂಪನ್ನನಾದ ಜಾನಕೀರಾಮನಂತೆ ಬಾಳಲಿ ಎಂಬ ಕನಸುಕಾಣುತ್ತಾಳೆ. ತಾಯಿಯ ಗರ್ಭದಲ್ಲೇ ಮಾವ ಶ್ರೀಕೃಷ್ಣನು ಹೇಳಿದ ಚಕ್ರವ್ಯೂಹದ ಬಗ್ಗೆ ಕೇಳಿ ಮುಂದೆ ದೊಡ್ಡವನಾಗಿ ಚಕ್ರವ್ಯೂಹವನ್ನು ಭೇದಿಸಿದ ಅಭಿಮನ್ಯುವಿನಂತೆ ಧೈರ್ಯಶಾಲಿ ಆಗಿರಲಿ ಎಂದು ಬಯಸುವರು. ಕಿತ್ತೂರು ಚನ್ನಮ್ಮ, ಝಾನ್ಸಿರಾಣೀ ಲಕ್ಷ್ಮೀಬಾಯಿ, ಅಶೋಕ ಚಕ್ರವರ್ತಿ, ಸಂಗೊಳ್ಳಿ ರಾಯಣ್ಣನಂತಹ ವೀರಧೀರರ ಜೀವನದ ಜ್ಯೋತಿ ದಾರಿದೀಪವಾಗಲೆಂದು ಬಯಸುವವರೇ ಹೆಚ್ಚು.

ಸುಖವೇ ಆಗಲಿ, ದುಃಖವೇ ಆಗಿರಲಿ ತನ್ನಂತೆಯೇ ಎಲ್ಲರಲ್ಲಿಯೂ ಸಮಾನವಾಗಿ ಭಾವಿಸುವವನು ಶ್ರೇಷ್ಠವಾದ ಯೋಗಿ. ಆಚಾರ್ಯತ್ರಯರು, ಬುದ್ಧ, ಪೈಗಂಬರ, ಬಸವಾದಿ ಶರಣರಂತೆ ಜಗತ್ತಿಗೆ ಆದರ್ಶಗಳನ್ನೂ ಬಿತ್ತುವ ಮಹಾನ್ ಪುರುಷರು ತಮ್ಮದೇ ಆದ ರೀತಿಯಲ್ಲಿ ಜ್ಞಾನವನ್ನು ಹರಡುವ, ಧರ್ಮ ಜಾಗರಣೆಯ ಕೈಂಕರ್ಯವನ್ನು ತತ್ವಪದಗಳ ಮೂಲಕ ವಚನಸಾಹಿತ್ಯದ ಮೂಲಕ ಮಾಡುತ್ತಿದ್ದರು.

ಶಂಕರಾಚಾರ್ಯರು "ಪ್ರತಿಯೊಂದು ವಸ್ತುವಿನಲ್ಲಿ ಭಗವಂತನನ್ನು ಕಾಣುವುದೇ ಅದ್ವೈತದ ಸಿದ್ಧಾಂತ. ಜಗತ್ತನ್ನು ಮಿಥ್ಯವೆಂದು ಸಾರಿದ ಬ್ರಹ್ಮ ಸತ್ಯ" ಎಂದು ಹೇಳಿ ಶಂಕರರು ಜ್ಞಾನ ಭಕ್ತಿಯ ಮೂಲಕ ಜನರನ್ನು ಲೌಕಿಕದಿಂದ ಅಲೌಕಿಕದ ಕಡೆ ಕೊಂಡೊಯ್ದ

ದಾರ್ಶನಿಕರು. ಭಗವಾನ್ ಬುದ್ಧ "ದುಃಖವು ಎಲ್ಲರ ಮನೆಯ ಕದವನ್ನು ತಟ್ಟುತ್ತದೆ, ಆದರೆ ಅದನ್ನು ಮರೆತು ಮುಂದುವರೆಯಬೇಕು" ಎಂದರು. ಮಹಿಳೆಯೊಬ್ಬಳು ತನ್ನ ಸತ್ತ ಮಗುವನ್ನು ಬದುಕಿಸೆಂದು ಅಂಗಲಾಚಿ ಬೇಡಿಕೊಳ್ಳುವಾಗ, ಸಾವಿಲ್ಲದ ಮನೆಯ ಸಾಸುವೆ ತಾರೆಂದರು. ಊರೆಲ್ಲ ಸುತ್ತಿ ಸಾವಿಲ್ಲದ ಮನೆ ಯಾವುದಿಲ್ಲವೆಂದು ಸತ್ಯವನ್ನು ತೋರಿಕೊಟ್ಟರು. ಸಾವು ವಿಶ್ವ ಸತ್ಯ, ಇದರಿಂದ ಯಾರೂ ಹೊರತಾಗಿಲ್ಲ, ಸತ್ತ ಆತ್ಮಕ್ಕೆ ಶಾಂತಿ ಕೋರಿ ಮುಕ್ತಿಯನ್ನು ನೀಡೆಂದು ಪ್ರಾರ್ಥಿಸಬಹುದೇ ವಿನಃ ಸಾವನ್ನು ಇಲ್ಲವಾಗಿಸುವುದು ಸಲ್ಲದ ಕೆಲಸವೆಂದು ಸಾವಿನ ನಿಶ್ಚಿತತೆಯ ಬಗ್ಗೆ ಹೇಳುತ್ತಾರೆ.

"ಕಲಬೇಡ, ಕೊಲಬೇಡ, ಹುಸಿಯ ನುಡಿಯಬೇಡ
ಅನ್ಯರಿಗೆ ಅಸಹ್ಯ ಪಡಬೇಡ
ತನ್ನ ಬಣ್ಣಿಸಬೇಡ, ಇದುರು ಹಳಿಯಲು ಬೇಡ
ಇದೇ ಅಂತರಂಗ ಶುದ್ಧಿ ಇದೇ ಬಹಿರಂಗ ಶುದ್ಧಿ
ಇದೇ ನಮ್ಮ ಕೂಡಲ ಸಂಗನೊಲಿವ ಪರಿ"

ಹೀಗೆ ಶರಣ ಬಸವಣ್ಣನವರು ಸನ್ಮಾರ್ಗದಲ್ಲಿ ನಡೆಯಲು ತಮ್ಮ ವಚನದ ಮೂಲಕ ಜನರಿಗೆ ಸತ್ಯದ ಅರಿವನ್ನು ನೀಡುತ್ತಾರೆ.

ಬತ್ತಿ ಎಣ್ಣೆಗಳೆರಡುಹೊತ್ತಿ ಬೆಳಗುವ ತೆರದಿ
ಸತ್ಯ ನೀತಿಗಳು ಬೆಳಗುತಿಹವು– ಜೋಡಗಲೆ
ಕತ್ತಲೀ ಜಗವು ಸರ್ವಜ್ಞ,

ಹೀಗೆ ಸತ್ಯ ನೀತಿಗಳು ಇರುವವರೆಗೆ ಮಾನವನ ಜೀವನದಲ್ಲಿ ಅಳವಡಿಸಿಕೊಂಡು ಬದುಕಿ ಜೀವನದ ಸಾರ್ಥಕ್ಯ ಪಡೆಯಲು ಕರೆಕೊಟ್ಟಿದ್ದಾರೆ.

ಇನ್ನು ದಾಸವರೇಣ್ಯರು ತಮ್ಮ ಸಾಹಿತ್ಯದ ರಚನೆಯ ಜೊತೆಗೆ ಕಾಲಲ್ಲಿ ಗೆಜ್ಜೆ ಕಟ್ಟಿ ತಾಳ ತಟ್ಟುತ್ತಾ ಹಾಡಿ ಕುಣಿದಾಡುವ ಜೊತೆಗೆ ಪರಮಾತ್ಮನನ್ನು ಕಾಣುವ ಮೋಕ್ಷ ಮಾರ್ಗವನ್ನು ಸುಲಲಿತವಾಗಿ ಜನಸಾಮಾನ್ಯರ ಮುಂದೆ ತೆರೆದಿಟ್ಟ ಬಗೆ ಅಪೂರ್ವವಾಗಿದೆ. "ಅಧ್ಯಾತ್ಮ ನಿಷ್ಠೆಯಿಂದ ಆತ್ಮೋದ್ಧಾರ, ಆತ್ಮೋದ್ಧಾರದಿಂದ ಲೋಕೋದ್ಧಾರ" ಇದು ಅವರ ತತ್ತ್ವ. ಭಗವದ್ಭಕ್ತಿಯನ್ನು ಪ್ರಕಟಿಸಲು ಸಂಗೀತ ಸಾಹಿತ್ಯಗಳೆರಡು ಅತ್ಯುತ್ತಮವಾದ ಮಾರ್ಗವೆಂದು ಅರಿತ ದಾಸರು ತಮ್ಮ ಕೀರ್ತನೆಗಳಲ್ಲಿ ನಿದರ್ಶಿಸುತ್ತಾರೆ.

ಕೇಳನೋ ಹರಿ ತಾಳನೊ
ತಾಳ ಮೇಳಗಳಿದ್ದು ಪ್ರೇಮವಿಲ್ಲದ ಗಾನ
ನಾನಾ ಬಗೆಯ ರಾಗ ಭಾವತಿಳಿದು ಸ್ವರ
ಜ್ಞಾನ ಮನೋಧರ್ಮ ಜಾತಿಯಿದ್ದು
ದಾನವಾರಿಯ ದಿವ್ಯ ನಾಮರಹಿತವಾದ
ಹೀನ ಸಂಗೀತ ಸಾಹಿತ್ಯಕ್ಕೆ ಮನವಿತ್ತು...

ಎಂದು ಹರಿನಾಮ ಸ್ಮರಣೆ ಮಾಡದ ಸಾಹಿತ್ಯ ಸಂಗೀತಗಳು ಲೌಕಿಕಾಸಕ್ತಿಯ ಕಡೆ ಹೊರಳಿದರೆ, ಅವು ಸಾರ್ಥಕವಲ್ಲ. ಅದಕ್ಕೆ ಹೀನತ್ವ ಪ್ರಾಪ್ತವಾಗುತ್ತದೆ ಎಂದು ಹೇಳುತ್ತಾರೆ.

ಕಾಮ ಕ್ರೋಧವ ಬಿಡಿರೆಂಬ ಕಾಗದ ಬಂದಿದೆ
ನೇಮ ನಿಷ್ಠೆಯೊಳಿರೆಂಬ ಕಾಗದ ಬಂದಿದೆ
ತಾಮಸ ಜನರ ಕೂಡದಿರೆಂಬ ಕಾಗದ ಬಂದಿದೆ
ನಮ್ಮ ಕಾಮನಯ್ಯನು ತಾನೇ ಬರೆದ ಕಾಗದ ಬಂದಿದೆ.

ಹೀಗೆ ಜನರಿಗೆ ಆತ್ಮೋದ್ಧಾರಕ್ಕೆ ಉನ್ನತಿಗೆ, ಪ್ರಗತಿಗೆ ಸಂಸ್ಕಾರ ಶುದ್ಧಿಗೆ ಅರಿಷಡ್ವರ್ಗಗಳನ್ನು ಮೀರಿ ಬದುಕಿರೆಂದು ಸ್ವತಃ ಕಮಲನಾಭನೇ ಬರೆದ ಕಾಗದವನ್ನು ಹಂಚಲು ಬಂದ ಅಂಚೆಯವನಾಗಿ ಆ ಕಾಗದದಲ್ಲಿ ಬರೆದ ವಿಷಯವನ್ನು ಓದಿ ಹೇಳುತ್ತಿದ್ದಾರೆ.

ಯೋಗ್ಯರಾಗಿ ಭೋಗ್ಯರಾಗಿ ಭಾಗ್ಯವಂತರಾಗಿ ನೀವು
ಅನ್ನದಾನವ ಮಾಡುವರಾಗಿ ಅನ್ನ ಛತ್ರವನಿಟ್ಟವರಾಗಿ
ಅನ್ಯವಾರ್ತೆಯ ಬಿಟ್ಟವರಾಗಿ ಅನುದಿನ ಭಜನೆ ಮಾಡುವರಾಗಿ

ಹೀಗೆ ರಾಗಿ ಎಂಬಲ್ಲಿ ಸತ್ಕರ್ಮ, ಸದ್ವಿಚಾರ, ಸದ್ವರ್ತನೆಯ ಮೂಲಕ ಇಂತಿಂಥವರಾಗಿ ಎಂಬ ನೀತಿಯನ್ನು ಬೋಧಿಸುತ್ತಾರೆ. ಪಂಡಿತ ವರ್ಗದಿಂದ ದೂರವಿರುವ ಸಾಮಾನ್ಯ ಜನರ ಸಮಕ್ಷಮ ನಿಲ್ಲುವ ಕನಕದಾಸರು ತಮ್ಮ ಕೀರ್ತನೆಗಳಲ್ಲಿ ಜನಸಾಮಾನ್ಯರ ತೀರ ಹತ್ತಿರ ನಿಂತು ಅವರ ಸ್ಪಂದನೆಯನ್ನು ಗಳಿಸುತ್ತಾರೆ. ಭಿನ್ನವಾದ ಕ್ರಾಂತಿಕಾರಿ ಮನೋಧರ್ಮವನ್ನು ಕಿಚ್ಚು ಹೆಚ್ಚಿಸುವ, ಹಚ್ಚುವ ನುಡಿ ಇವರ ಬರಹದಲ್ಲಿದೆ.

ನಾವು ಕುರುಬರು ನಮ್ಮ ದೇವರು ಬೀರಯ್ಯ
ಕಾವ ನಮ್ಮಜ್ಜ ನರಗುರಿಯ ಹಿಂಡುಗಳ
ಅಷ್ಟ ಮದ ಮತ್ಸರಗಳೆಂತೆಂಬ ಟಗರುಗಳು
ಸೃಷ್ಟಿಯೋಳು ಪರಮಾತ್ಮನೆಂಬ ಆಡು

ಹೀಗೆ ಕುರಿಗಳಿಗೆ ಮನುಜರನ್ನು ಹೋಲಿಸಿ ಕಾವಲುಗಾರನಾಗಿರುವ ಪರಮಾತ್ಮನನು ಅಜ್ಜ ಅಂದರೆ ಹಿರಿಯನಿಗೆ ಹೋಲಿಸಿ ಸಿದ್ಧ ಸಾಧಕರ ಮಾರ್ಗದರ್ಶನದಲ್ಲಿ ಅರಿಷಡ್ವರ್ಗಗಳನ್ನು ಗೆಲ್ಲುವಂತೆ ಪ್ರೇರೇಪಿಸುತ್ತಾರೆ. ವೇದ ಶಾಸ್ತ್ರ ಶ್ರುತಿ ಪುರಾಣಗಳೆಂಬ ನಾಯಿಯನ್ನು ಬೆಂಗಾವಲಿಗೆ ಬಿಟ್ಟು ಅದು ಭೇದವಿಲ್ಲದೇ ಬೊಗಳಿ ನಮ್ಮನ್ನೆಲ್ಲ ಹೆದರಿಸಿ, ಅತ್ತಿತ್ತ ನಮ್ಮ ಮನಸ್ಸು ವಿಚಲಿತವಾಗದಂತೆ ಕಾಯುತ್ತಾನೆ. ಆಮೇಲೆ ನಮಗೆ ಸಾಯುಜ್ಯವನ್ನು ಕೊಟ್ಟು ಕಾಪಾಡುತ್ತಾನೆ ಎಂದು ಗ್ರಾಮ್ಯ ಭಾಷೆಯಲ್ಲಿ ಜೀವನವನ್ನು ವಿಶದೀಕರಿಸುತ್ತಾರೆ.

ಬಾಯಿ ನಾರಿದ ಮೇಲೆ ಏಕಾಂತವೇ
ತಾಯಿ ತೀರಿದ ಮೇಲೆ ತವರಾಸೆಯೆ

ಎಂಬ ಕೀರ್ತನೆಯಲ್ಲಿ ಭಕ್ತಿ ಇಲ್ಲದೇ ಮುಕ್ತಿ ಸಿಗುವುದೇ ಎಂದು ಕೇಳುತ್ತಾರೆ.

ಸತ್ಯವಂತರ ಸಂಗವಿರಲು ತೀರ್ಥವೇತಕೆ
ನಿತ್ಯ ಅನ್ನದಾನವಿರಲು ಭಯವು ಏತಕೆ
ಸನ್ನೆಯರಿತು ನಡೆಯದಂಥ ಸತಿಯಿದ್ದೇತಕೆ
ಭಿನ್ನವರಿತು ನಡೆಯದಂಥ ಸ್ನೇಹವೇತಕೆ
ಮುನ್ನ ಕೊಟ್ಟು ಹುಟ್ಟಲಿಲ್ಲ ಬಯಸಲೇತಕೆ
ಚೆನ್ನ ಆದಿಕೇಶವನಿರಲು ದೈವವೇತಕೆ

ಹೀಗೆ ಭಕ್ತಿಯ ಅರಿವು ಹೆಚ್ಚಿಸಿ ಮಾರ್ಮಿಕವಾಗಿ ಸಾಯುಜ್ಯ ಪದವಿ ಪಡೆಯಲು ದಿನದಿನವೂ ಒಳ್ಳೆಯ ಕರ್ಮಗಳನ್ನು ಮಾಡೆಂದು ತಿಳಿಸುತ್ತಾರೆ.

ಹೀಗೆ ಹಲವಾರು ದಾಸರು ತಮ್ಮ ಸಾಹಿತ್ಯದ ಮೂಲಕ ದೈವಕೃಪೆಗೆ ಪಾತ್ರರಾಗಲು ಸಂಸ್ಕಾರವಂತರಾಗಿ ಬದುಕಲು ಕರೆಕೊಟ್ಟಿದ್ದಾರೆ.

**ರಾಮಕೃಷ್ಣ ಪರಹಂಸರ** ಸಂದೇಶಗಳನ್ನು ನೋಡುವುದಾದರೆ,

- ರಾತ್ರಿಯ ವೇಳೆ ನಕ್ಷತ್ರಗಳನ್ನು ನೋಡುತ್ತೇವೆ. ಹಗಲಿನಲ್ಲಿ ಅವು ಕಾಣದಿದ್ದರೆ ನಕ್ಷತ್ರಗಳೇ ಇಲ್ಲವೆನ್ನಬಹುದೇ? ಹಾಗೇ ಅಜ್ಞಾನದ ದಿನಗಳಲ್ಲಿ ನೀನು ದೇವರನ್ನು ನೋಡಲಾಗದೇ ಹೋದರೆ ದೇವರೇ ಇಲ್ಲವೆನ್ನಲಾಗುವುದಿಲ್ಲ.
- ಸೂರ್ಯ ಭೂಮಿಯನ್ನು ಬೆಳಗುತ್ತಾನೆ. ಆದರೆ ಒಂದು ಸಣ್ಣ ಮೋಡ ಸೂರ್ಯನನ್ನೂ ನಮ್ಮಿಂದ ದೂರ ಮಾಡುತ್ತದೆ. ಅದೇ ರೀತಿ ಮಾಯೆಯ ಪರದೆಯು ಸರ್ವವ್ಯಾಪಿಯಾದ ಮತ್ತು ಸರ್ವಸಾಕ್ಷಿಯಾದ ಸತ್-ಚಿತ್ ಆನಂದವನ್ನು ಮರೆಮಾಡುತ್ತದೆ.
- ನಾನು ಈ ಬಟ್ಟೆಯನ್ನು ಅಡ್ಡಲಾಗಿ ಹಿಡಿದರೆ, ನಾನು ನಿಮಗೆ ಮೊದಲಿನಷ್ಟೇ ದೂರವಿದ್ದರೂ ನನ್ನನ್ನು ನೋಡಲಾಗುವುದಿಲ್ಲ. ಅದೇ ರೀತಿ ದೇವರು ಎಲ್ಲಕ್ಕಿಂತ ಹತ್ತಿರದಲ್ಲಿದ್ದರೂ ನಮ್ಮ ಅಹಂಕಾರವೆಂಬ ಪರದೆಯಿರುವುದರಿಂದ ಅವನನ್ನು ನೋಡಲಾಗುವುದಿಲ್ಲ.
- ನೀನು ಪ್ರಾಮಾಣಿಕ ಪರಿಶುದ್ಧನಾಗಿ ಒಳ್ಳೆಯವನಾಗಿದ್ದರೆ ದೇವರು ನಿನ್ನ ಹತ್ತಿರ ಸದ್ಗುರುವನ್ನು ಕಳುಹಿಸುತ್ತಾನೆ. ಶ್ರದ್ಧೆ ಎಂಬುದು ಮುಖ್ಯ.
- ಮನುಷ್ಯನ ಜೀವನದ ಗುರಿ ದೇವರ ಸಾಕ್ಷಾತ್ಕಾರ ಎಂದು ಕೆಲವೇ ಜನರಿಗೆ ಅರಿವಾಗುವುದು.
- ಸರಿಗಮಪಧನಿ ಎಂದು ಬಾಯಲ್ಲಿ ಹೇಳುವುದು ಸುಲಭ. ಆದರೆ ಅದನ್ನು ವಾದ್ಯದಲ್ಲಿ ನುಡಿಸುವುದು ಕಷ್ಟ. ಅದೇ ರೀತಿ ಧರ್ಮದ ಬಗ್ಗೆ ಮಾತನಾಡುವುದು ಸುಲಭ. ಆದರೆ ಅದನ್ನು ಆಚರಿಸುವುದು ಕಷ್ಟ ಎಂದು ಜೀವನಕ್ಕೆ ಬೇಕಾದ ತತ್ವಗಳನ್ನು ಉಪದೇಶಿಸುತ್ತಾರೆ.

ಇನ್ನು ಇವರ ಶಿಷ್ಯರಾದ ವಿವೇಕಾನಂದರ ಹಲವು ಸಂದೇಶಗಳನ್ನು ನೋಡುವುದಾದರೆ,

- ಭಾರತ ಅಮರ, ಭಗವದನ್ವೇಷಣೆ ಮಾರ್ಗ ತ್ಯಜಿಸದಿದ್ದರೆ.
- ಮಾನವ ಸಮಾಜದಿಂದ ಧರ್ಮವನ್ನು ತೆಗೆದುಬಿಡಿ ಇನ್ನೇನು ಉಳಿಯುತ್ತದೆ? ಮೃಗಗಳ ಒಂದು ಅರಣ್ಯವಷ್ಟೇ. ಇಂದ್ರಿಯ ಸುಖ ಮಾನವತೆಯ ಗುರಿಯಲ್ಲ. ಜ್ಞಾನ ಎಲ್ಲ ಬದುಕಿನ ಗುರಿ.
- ಯಾವ ಕೆಲಸವೂ ಲೌಕಿಕವಲ್ಲ, ಎಲ್ಲ ಕೆಲಸವೂ ಭಕ್ತಿ ಪೂರ್ವಕ ಪೂಜೆ.

ಗುಡಿಯ ನೋಡಿರಣ್ಣಾ ದೇಹದ ಗುಡಿಯ ನೋಡಿರಣ್ಣಾ
ಗುಡಿಯ ನೋಡಿರಿದು ಪೊಡವಿಗೆ ಒಡೆಯನು
ಅಡಗಿಕೊಂಡು ಕಡು ಬೆಡಗಿನೊಳಿರುತಿಹ ಗುಡಿಯ ನೋಡಿರಣ್ಣಾ...

ಈಗಿನ ವಿದ್ಯಮಾನಗಳಿಗೆ ಹೊಂದುವಂತೆ ಮತ ಧರ್ಮಗಳ ಧರ್ಮಾಚರಣೆಗಳ ಅಧಿಪತ್ಯ ಶಕ್ತಿಗಳೂ, ಆಯಾ ಧರ್ಮಗಳಲ್ಲಿನ ಅನುಭಾವ್ಯದ ಪ್ರಜ್ಞೆಗಳ ಕಡೆ ಬೆನ್ನು ಮಾಡಿ ನಿಲ್ಲದೇಪ್ರಾಂಜಲರಾಗಿ ಆ ಅನುಭಾವತೆಗಳಲ್ಲಿನ ಸರಳತೆಯನ್ನು ಅರ್ಥಮಾಡಿಕೊಂಡು ಆ ಮೂಲಕ ಜಗತ್ತು, ಜೀವ, ಮಾನವ ಸಮುದಾಯವನ್ನು ಸಂರಕ್ಷಿಸುವ ಪ್ರಜ್ಞೆ ಬಿತ್ತುವ ಕೆಲಸ ಮಾಡಿದ್ದಾರೆ. ತರವಲ್ಲ ತಗೀ ನಿನ್ನ ತಂಬೂರಿ ಸ್ವರ

ಬರದೇ ಬಾರಿಸದಿರು ತಂಬೂರಿ.
ಸರಸ ಸಂಗೀತದ ಕುರುಹುಗಳರಿಯದೇ
ಬರಿದೆ ಬಾರಿಸದಿರು ತಂಬೂರಿ...

ಎಂದು ಜೀವನ ಸಂಗೀತದಲ್ಲಿ ಸ್ವರ ತಪ್ಪದೇ ಒಪ್ಪವಾಗಿ ನುಡಿಸಿರೆಂದು ಶಿಶುನಾಳ ಶರೀಫರು ಜಗತ್ತಿಗೆ ಸಾರುತ್ತಾರೆ.

ಸುಸಂಸ್ಕೃತ ಭೂಮಿಯಾದ ಭಾರತ ವಿವಿಧ ಸಂಸ್ಕೃತಿಗಳ ನೆಲೆಬೀಡು. ಕಲೆಗಳ ತವರು ಎಂಬ ಹೆಗ್ಗಳಿಕೆ ಇದರದು. ಈ ಪುಣ್ಯಭೂಮಿಯ ಜನ ತಮ್ಮ ಆದರ್ಶಪ್ರಾಯ ನಡೆ-ನುಡಿ, ಶ್ರೀಮಂತ ಸಂಸ್ಕೃತಿಯ ಮೂಲಕ ಮಿಕ್ಕೆಲ್ಲ ರಾಷ್ಟ್ರಗಳ ಗಮನ ಸೆಳೆಯುತ್ತಿದ್ದಾರೆ. ವಿದೇಶಿಯರೂ ಈ ಸಂಸ್ಕೃತಿಗೆ ಮಾರು ಹೋಗಿ, ನಮ್ಮ ಕಲೆಗಳನ್ನು ಕಲಿತು ಸಂತೋಷಭರಿತ ಜೀವನ ನಡೆಸಲು ಹಂಬಲಿಸುವುದು ಇದೇ ಕಾರಣಕ್ಕೆ. ಭಾರತೀಯ ಜೀವನ ಮೌಲ್ಯಗಳು ಅಂತಿಮವಾಗಿ ಪರಮಾತ್ಮನ ಸಾನ್ನಿಧ್ಯ ದೊರಕಿಸುತ್ತವೆ ಎಂಬ ಭಾವನೆ ಬೆಳೆಯುತ್ತಿದೆ. ಹೀಗಾಗಿ ಇಲ್ಲಿನ ಸಂಸ್ಕೃತಿಗಳ ಪ್ರತಿಬಿಂಬವಾದ ಲಲಿತಕಲೆಗಳನ್ನು ಕಲಿತು ಪರಮಾರ್ಥ ಹೊಂದಲು ಬಹಳಷ್ಟು ಜನ ಭರತಭೂಮಿಯತ್ತ ಮುಖಮಾಡಿದ್ದಾರೆ.

ಬಹುಮುಖಿ ಪರಂಪರೆ ಹೊಂದಿದ ಭಾರತ ಸಾಂಸ್ಕೃತಿಕವಾಗಿ ಅಗ್ರ ಸ್ಥಾನದಲ್ಲಿದೆ. ಇಲ್ಲಿಗೆ ವ್ಯಾಪಾರಕ್ಕೆಂದು ಬಂದ ವಿದೇಶಿಯರು ಪ್ರಾಕೃತಿಕ ಸಂಪತ್ತು, ಜನರ ನಡೆ-ನುಡಿ, ಆಚಾರ-ವಿಚಾರ, ಉಡುಗೆ-ತೊಡುಗೆ ಹೀಗೆ ಹಲವಾರು ವಿಷಯಗಳಿಂದ ಪ್ರಭಾವಿತರಾದರು. ಕೆಲವರು ಒಳ್ಳೆಯ ಮೌಲ್ಯಗಳನ್ನು ರೂಢಿಸಿಕೊಂಡರು. ಇನ್ನು ಕೆಲವರು ಇಲ್ಲಿನ ಸಂಸ್ಕೃತಿಯನ್ನು ನಾಶಪಡಿಸಲು ಯತ್ನಿಸಿದರಾದರೂ ಯಶ ಕಾಣಲಿಲ್ಲ. ವೈರುಧ್ಯವೆಂಬಂತೆ ಭಾರತೀಯರಲ್ಲಿ ಕೆಲ ಮನಸ್ಥಿತಿಗಳು ಪಾಶ್ಚಾತ್ಯರನ್ನು ಅನುಕರಿಸುವ, ಅವರಂತೆ ಬದುಕು ನಡೆಸುವ ಹವಣಿಕೆಯಲ್ಲಿವೆ. ಅಂಗೈಯಲ್ಲಿರುವ ತುಪ್ಪ ಬಿಟ್ಟು ಬೆಣ್ಣೆಗಾಗಿ ಅಲೆದಾಡುವ ರೀತಿ ಅವರದು. ವಿದೇಶಗಳಿಗೆ ತೆರಳಿ ಹಣಗಳಿಸಬೇಕು, ಅವರಂತೆ ಶ್ರೀಮಂತಿಕೆಯ ಜೀವನ ನಡೆಸಬೇಕೆಂಬುದೇ ಬಹುಪಾಲು ಜನರ ಬಯಕೆಯಾಗಿರುವಂತೆ ತೋರುತ್ತದೆ. ಅನ್ಯದೇಶಗಳ ಪೌರತ್ವ ಪಡೆಯಲು ಭಾರತೀಯರು ಸರತಿಯಲ್ಲಿ ಕಾದು ಕುಳಿತಂತಿದೆ.

ಈ ರೀತಿಯ ಮನಸ್ಥಿತಿ ಇರುವ ನಮ್ಮ ಜನರಿಗೆ ದಾರ್ಶನಿಕರ ತತ್ವಗಳು ಹಣತೆಯಾಗಿ ಅವರು ನೀತಿವಂತರಾಗಿ ಬಾಳಲು ಸುಸಂಸ್ಕೃತರಾಗಿ ದೈಹಿಕ ಹಾಗೂ ಮಾನಸಿಕ ಪರಿಪೂರ್ಣ ಆರೋಗ್ಯವಂತರಾಗಲಿ ಹೀಗೆ ತತ್ವದ ಬೆಳಕಿನಲ್ಲಿ ಸಂಸ್ಕಾರಗಳ ಹುಡುಕಾಟಕ್ಕೆ ಅರ್ಥ ಸಿಗಲಿ ಎಂದು ಹೃದಯಪೂರ್ವಕವಾಗಿ ಹಾರೈಸೋಣ.